**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.185/2020

**PW**. 8

**CW**. 8

**ಸಾಕ್ಷಿಯ ಹೆಸರು –ಜಯಶೀಲ**

**ಗಂಡನ ಹೆಸರು –ರಾಮಸ್ವಾಮಿ**

**ವಯಸ್ಸು –34 ವರ್ಷಗಳು** ದಿನಾಂಕ 02–07–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಅಂಗನವಾಡಿ ಕಾರ್ಯಕರ್ತೆ**

**ವಾಸಸ್ಥಳ –ಚಾಮಲಾಪುರ ಗ್ರಾಮ , ಹೆಚ್ ಡಿ ಕೋಟೆ ತಾ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ನನ್ನ ಅತ್ತೆ. ಮೃತ ದಾಸಶೆಟ್ಟಿ ನನ್ನ ಮಾವ. ಚಾಸಾ–13 ನನ್ನ ಗಂಡ. ಚಾಸಾ–14 ನನ್ನ ಮೈದುನ. ನಾನು ಕಳೆದ 18 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ದಿಃ 23–04–2016 ರಂದು ನನ್ನ ಮಾವ ವಿಷ ಸೇವನೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಪಟ್ಟು , ದಿಃ 27–04–2016 ರಂದು ಮೃತಪಟ್ಟರು. ಒಂದನೇ ಆರೋಪಿ ಈ ಹಿಂದೆ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದ. 1 ನೇ ಆರೋಪಿ ಈ ಹಿಂದೆ ಅಂಗನವಾಡಿ ಬಾಲ ವಿಕಾಸ ಸಮೀತಿಯ ಅಧ್ಯಕ್ಷನಾಗಿದ್ದನು. ಮಕ್ಕಳ ಪೋಷಕರು ಸದಸ್ಯರಾಗಿರುತ್ತಾರೆ. ಆ ಸಮಯದಲ್ಲಿ ನಮ್ಮ ಅಂಗನವಾಡಿಯಲ್ಲಿ 26 ಜನ ಮಕ್ಕಳಿದ್ದರು. 6 ತಿಂಗಳಿನಿಂದ 3 ವರ್ಷದ ಮಕ್ಕಳಿಗೆ ಅವರ ಮನೆಗೆ ಪೌಷ್ಟಿಕ ಆಹಾರವನ್ನು ವಿತರಿಸಲಾಗುತ್ತದೆ. ಸದರಿ ಪೌಷ್ಟಿಕ ಆಹಾರ ಪದಾರ್ಥಗಳನ್ನು ಸರ್ಕಾರದಿಂದ ನಮ್ಮ ಕೇಂದ್ರಕ್ಕೆ ಬರುತ್ತದೆ. ಮಕ್ಕಳಿಗೆ ಪೌಷ್ಟಿಕ

ಆಹಾರ ವಿತರಿಸಲು ಅಧ್ಯಕ್ಷರನ್ನು ಕರೆಯುತ್ತೇವೆ. ಅಧ್ಯಕ್ಷರನ್ನು ಫೋನ್ ಮೂಲಕ ಕರೆದಾಗ ಅವರು ಕರೆ ಸ್ವೀಕರಿಸಲಿಲ್ಲ.

ದಿಃ 23-04-2016 ರಂದು ನಮ್ಮ ವಾರ್ಡ ನ ಸಭೆ 9.30 ರಿಂದ 11.00 ಗಂಟೆವರೆಗೆ ಇತ್ತು. ಸದರಿ ಸಭೆಗೆ ಸಮಿತಿ ಸದಸ್ಯರು ಮತ್ತು ನಾನು ಹೋಗಿದ್ದೆವು. ಸದರಿ ಸಭೆಗೆ 1 ನೇ ಆರೋಪಿ ಬಂದಿದ್ದನು. ಪಡಿತರ ಪದಾರ್ಥಗಳನ್ನು ವಿತರಿಸಲು ನಿಮ್ಮನ್ನು ಕರೆದಾಗ ನೀವು ಫೋನ ಸ್ವೀಕರಿಸಲಿಲ್ಲ ಎಂದು 1 ನೇ ಆರೋಪಿಗೆ ನಾನು ಹೇಳಿದೆ. ನನಗೆ ಬೇರೆ ಬೇರೆ ಕೆಲಸಗಳು ಇರುವುದರಿಂದ ಕರೆಯನ್ನು ಸ್ವೀಕರಿಸಲು ಆಗುವುದಿಲ್ಲ, ನಾನು ಕರೆ ಸ್ವೀಕರಿಸಿದಾಗ ನೀನು ಮಾತನಾಡಬೇಕು , ನಾನು ಹೇಳಿದಾಗ ಆಹಾರವನ್ನು ವಿತರಿಸಬೇಕು , ಹಾಗೂ ಅವಾಚ್ಯ ಶಬ್ದಗಳಿಂದ ನನಗೆ ಬೈದರು. ಸಂಬಂಧಪಟ್ಟ ಇಲಾಖೆಗೆ ದೂರು ನೀಡಿ , ನಿನ್ನನ್ನು ಕೆಲಸದಿಂದ ತೆಗೆಸುತ್ತೇನೆ ಎಂದು ಹೇಳಿದನು. ಆಗ ಅಲ್ಲೆ ಇದ್ದ ಊರಿನ ಮುಖಂಡರು 1 ನೇ ಆರೋಪಿಗೆ ಸಮಾಧಾನ ಮಾಡಿ ಕಳುಹಿಸಿದರು. ಆಗ ನಾನು ನನ್ನ ಗಂಡನಿಗೆ ಕರೆ ಮಾಡಿ ಸ್ಥಳಕ್ಕೆ ಕರೆಸಿದೆ. ಆಗ 1 ನೇ ಆರೋಪಿ ನನ್ನ ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈದು , ನಿನ್ನ ಹೆಂಡತಿಯನ್ನು ಕೆಲಸದಿಂದ ತೆಗೆದು ಹಾಕಿಸುತ್ತೇನೆ , ಏನು ಮಾಡಿಕೊಳ್ಳುತ್ತೀಯಾ ಮಾಡಿಕೋ ಎಂದು ಹೇಳಿದನು.

ಅದೇ ದಿನ ಸಂಜೆ 6.30 ಗಂಟೆ ಸಮಯಕ್ಕೆ ನಾನು ನಮ್ಮ ಮನೆಯ ಹತ್ತಿರ ಇರುವಾಗ , ಎಲ್ಲ ಆರೋಪಿತರು ನಮ್ಮ ಮನೆಯ ಹತ್ತಿರ ಬಂದು, ನನ್ನ ಜೊತೆ ಜಗಳ ಮಾಡಿ ,ಆರೋಾಪಿತರು ಕೈಯಿಂದ ಕಾಪಾಲಕ್ಕೆ , ಬೆನ್ನಿಗೆ ಹಾಗೂ ಇತರ ಭಾಗಕ್ಕೆ ಹೊಡೆದರು, ಹಾಗೂ ನನ್ನ ಬಟ್ಟೆಯನ್ನು ಕಿತ್ತು ಹಾಕಿದರು. ಆಗ ನನ್ನ ಮಾವ , ಮೈದುನು ಹಾಗೂ ನನ್ನ ಕುಟುಂಬದ ಸದಸ್ಯರು ಬಿಡಿಸಲು ಬಂದಾಗ ಆರೋಪಿತರು ಅವರಿಗೂ ಕೂಡ ತುಂಬ ಹೊಡೆದರು. ಇತರ ಆರೋಪಿತರು ದೊಣ್ಣೆ ಮತ್ತು ನಲ್ಲಿ ಪೈಪ್ ನಿಂದ ಹೊಡೆದು ಗಾಯ ಮಾಡಿದರು. ಗಾಯಗೊಂಡ ನಾನು , ನನ್ನ ಗಂಡ ,

ಚಾಸಾ–4, ಚಾಸಾ–11, ಚಾಸಾ–13 ಇತರರು ಆಸ್ಪತ್ರೆಗೆ ಹೋದೆವು. ನನ್ನ ಮಾವ ದಾಸಶೆಟ್ಟಿಗೆ ಸದರಿ ಗಲಾಟೆಯಲ್ಲಿ ಎದೆಗೆ ಪೆಟ್ಟಾಗಿ , ಮನೆಯಲ್ಲಿ ಇದ್ದರು.

ಅದೇ ದಿನ ಸಂಜೆ 7.00 ಗಂಟೆ ಸುಮಾರಿಗೆ ಚಾಸಾ–1 ಮತ್ತು ಮೃತ ದಾಸಶೆಟ್ಟಿ ಮನೆಯಲ್ಲಿ ಇದ್ದಾಗ , 1 ನೇ ಆರೋಪಿ ಮತ್ತು ಇತರರು ನಮ್ಮ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ನನ್ನ ಮಾವನಿಗೆ ಮಾನಸಿಕ ಕಿರುಕುಳ ನೀಡಿ ಆರೋಪಿತರು ಒತ್ತಾಯದಿಂದ ನನ್ನ ಮಾವನಿಗೆ ವಿಷ ಕುಡಿಸಿರುತ್ತಾರೆ. ನಂತರ ನನ್ನ ಮಾವನನ್ನು ಮೈಸೂರು ಕೆ ಆರ್ ಆಸ್ಪತ್ರೆಗೆ ದಾಖಲಿಸಿದ್ದು , 5 ದಿನಗಳ ನಂತರ ಚಿಕಿತ್ಸೆ ಫಲಕಾರಿಯಾಗದೇ ನನ್ನ ಮಾವ ಮೃತಪಟ್ಟಿರುತ್ತಾರೆ. ನನಗೆ ಆರೋಪಿತರು ಬಟ್ಟೆ ಕಿತ್ತು ಹಾಕಿ ಗಲಾಟೆ ಮಾಡಿದ ಬಗ್ಗೆ ನಾನು ಪ್ರತ್ಯೇಕ ದೂರು ನೀಡಿದ್ದೇನೆ. ಘಟನೆ ಬಗ್ಗೆ ಪೊಲೀಸರು ನನ್ನ ಹೇಳಿಕೆ ಬರೆದುಕೊಂಡಿದ್ದಾರೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಕೆ ಸಿ ಬಿ ವಕೀಲರಿಂದಃ–**

ಬಾಲ ವಿಕಾಸ ಸಮಿತಿಯ ಅಧ್ಯಕ್ಷರು  ಅಂಗನವಾಡಿ ಕೇಂದ್ರದ ಆಗು ಹೋಗುಗಳ ಬಗ್ಗೆ ವಿಚಾರಿಸಲು ಅಧಿಕಾರ ಇದೆ ಎಂದರೆ ಸರಿ. ನಾನು ಆಹಾರ ಪದಾರ್ಥಗಳನ್ನು ಸರಿಯಾಗಿ ವಿತರಿಸದಿದ್ದರೆ ಬಾಲ ವಿಕಾಸ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಸಂಬಂಧಪಟ್ಟ ಇಲಾಖೆಗೆ ದೂರು ನೀಡಬಹುದು ಎಂದರೆ ಸರಿ . ದಿಃ 23–04–2016 ರಂದು ನಮ್ಮ ಅಂಗನವಾಡಿ ಕೇಂದ್ರದ ಪಕ್ಕದ ಶಾಲಾ ಆವರಣದಲ್ಲಿ ಬೆಳಿಗ್ಗೆ 9.30 ರಿಂದ 11.00 ರವರೆಗೆ ವಾರ್ಡ ಸಭೆ ಇತ್ತು ಎಂದರೆ ಸರಿ . ಸದರಿ ವಾರ್ಡ ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು , ಸದಸ್ಯರು ಮತ್ತು ಪಿಡಿಓ ಹಾಗೂ ಇತರರು ಇರುತ್ತಾರೆ ಎಂದರೆ ಸರಿ. ದಿಃ 22–04–2016 ರಂದು ಆಹಾರ ಪದಾರ್ಥಗಳನ್ನು ವಿತರಣೆ ಮಾಡಿರಲಿಲ್ಲ.

ನಮ್ಮ ಅಂಗನವಾಡಿ ಕೇಂದ್ರ ಮತ್ತು ನಮ್ಮ ವಾಸದ ಮನೆ ಒಂದೇ ಗ್ರಾಮದಲ್ಲಿವೆ ಎಂದರೆ ಸರಿ . ಗಲಾಟೆ ಸಂಜೆ 6.30 ಗಂಟೆಗೆ ಶುರುವಾಗಿ ಎಷ್ಟು ಗಂಟೆಗೆ ಮುಗಿತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಊರಿನಿಂದ ಹೆಚ್ ಡಿ ಕೋಟೆಗೆ 26 ಕಿ ಮೀ ಅಂತರವಿದೆ. ಆ ದಿನ ಸಂಜೆ 7.30 ಗಂಟೆಗೆ ನಾವು ಎಲ್ಲರೂ ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇವೆ. ಮರುದಿನ ಆಸ್ಪತ್ರೆಯಿಂದ ಬಂದೆವು. ಗಲಾಟೆಯಾದ ನಂತರ ಮೊದಲು ಆಸ್ಪತ್ರೆಗೆ ಹೋಗಿ ನಂತರ ಮರುದಿನ ಪೊಲೀಸ್ ಠಾಣೆಗೆ ಹೋಗಿದ್ದೇವೆ. ನಾನು, ನನ್ನ ಗಂಡ, ಚಾಸಾ-4, ಚಾಸಾ-11, ಚಾಸಾ-13 ಒಳರೋಗಿಯಾಗಿ ಚಿಕಿತ್ಸೆ ಪಡೆದು, ಮರುದಿನ ಆಸ್ಪತ್ರೆಯಿಂದ ಬಂದೆವು. ನನ್ನ ಮೈದುನ ಪಾಪಣ್ಣ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ. ಈ ಪ್ರಕರಣದ ಒಂದನೇ ಆರೋಪಿ ಅವರ ಮೇಲೆ ಹಲ್ಲೆ ಆದ ಬಗ್ಗೆ ನಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ . ಸದರಿ ಪ್ರಕರಣದಲ್ಲಿ ನಮ್ಮ ಕುಟುಂಬದ 12 ಜನರ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ಸರಿ .

ಆರೋಪಿತರು ನಮ್ಮ ಮೇಲೆ ದೂರು ನೀಡಿದ ಕಾರಣದಿಂದ ನಾವು ಅವರ ಮೇಲೆ ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ದಿಃ 23-04-2016 ರಂದು ಸಂಜೆ 7.00 ಗಂಟೆಗೆ ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ಮಾಡಿದ ಗಲಾಟೆಯನ್ನು ಕಾಂತರಾಜು, ಮಂಜುನಾಥ ಹಾಗೂ ಶಿವ ಎನ್ನುವವರು ನೋಡಿರುತ್ತಾರೆ. ನಾವು ಆಸ್ಪತ್ರೆಯಲ್ಲಿದ್ದಾಗ ನನ್ನ ಮಾವ ಮನೆಯ ಹತ್ತಿರ ದಾಸಶೆಟ್ಟಿ ವಿಷ ಸೇವಿಸಿದ ವಿಚಾರವನ್ನು ಕಾಂತರಾಜು, ಮಂಜುನಾಥ ನಮಗೆ 7.30 ಗಂಟೆಗೆ ಫೋನ್ ನಲ್ಲಿ ಹೇಳಿದರು. ಆರೋಪಿತರು ದಿಃ 23-04-2016 ರಂದು ಸಂಜೆ 7.30 ರ ಸಮಯದಲ್ಲಿ ನಮ್ಮ ಮನೆಯ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ . ಆರೋಪಿತರು ನನ್ನ ಮಾವ ದಾಸಶೆಟ್ಟಿ ವಿಷ ಸೇವನೆ ಮಾಡಿ ಮಾನಸಿಕ ಹಿಂಸೆ ನೀಡಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ನೀಡಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಸಂಜೆ

7.45 ಗಂಟೆಗೆ ನನ್ನ ಮಾವನಿಗೆ ಕೆ ಆರ್ ಆಸ್ಪತ್ರೆ ಮೈಸೂರಿಗೆ ಕರೆದುಕೊಂಡು ಬಂದಿದ್ದರು. ನಾನು ಪಿ ಯು ಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. ನಮ್ಮ ಊರು ಚಾಮಲಾಪುರದಿಂದ ಮೈಸೂರಿಗೆ 35 ಕಿಮೀ ದೂರದಲ್ಲಿದೆ. ನಾನು ಅಂಗನವಾಡಿ ಕೇಂದ್ರದ ಮೂಲಕ ಮಕ್ಕಳು ಮತ್ತು ಗರ್ಭಿಣಿ ಮಹಿಳೆಯರಿಗೆ ವಿತರಿಸಲಾದ ಆಹಾರ ಧಾನ್ಯಗಳನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು 1 ನೇ ಆರೋಪಿ ಕೇಳಿದ್ದರಿಂದ ಅವರ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.